# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1120 |
| ಸದಸ್ಯರ ಹೆಸರು | : | ಶ್ರೀ ಹೆಚ್. ಎಸ್. ಗೋಪಿನಾಥ್ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದರು) |
| ಉತ್ತರಿಸಬೇಕಾದ ದಿನಾಂಕ | : | 23-02-2024 |
| ಉತ್ತರಿಸುವವರು | : | ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು. |

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ.</td><td>ರಾಜ್ಯದಲ್ಲಿ ಗೃಹಲಕ್ಷ್ಮೀ ಯೋಜನೆಯಡಿ ನೋಂದಾಯಿಸಿಕೊಂಡಿರುವವರ ಸಂಖ್ಯೆ ಎಷ್ಟು; ಈ ಪೈಕಿ ಸ್ವೀಕೃತಗೊಂಡಿರುವ ಮತ್ತು ತಿರಸ್ಕೃತಗೊಂಡಿರುವ ಅರ್ಜಿಗಳೆಷ್ಟು; (ವಿವರ ನೀಡುವುದು)</td><td>ರಾಜ್ಯದಲ್ಲಿ ಇದುವರೆಗೆ ಗೃಹಲಕ್ಷ್ಮೀ ಯೋಜನೆಯಡಿ ನೋಂದಾಯಿಸಿಕೊಂಡಿರುವವರ ಸಂಖ್ಯೆಯನ್ನು ಅನುಬಂಧ-1ರಲ್ಲಿ ಒದಗಿಸಲಾಗಿದೆ.<br><br>ಈ ಪೈಕಿ ಸ್ವೀಕೃತಗೊಂಡಿರುವ ಮತ್ತು ತಿರಸ್ಕೃತಗೊಂಡಿರುವ ಅರ್ಜಿಗಳ ಮಾಹಿತಿಯನ್ನು ಅನುಬಂಧ-2ರಲ್ಲಿ ಒದಗಿಸಲಾಗಿದೆ.</td></tr>
<tr><td>ಆ.</td><td>ಈ ಪೈಕಿ ಎಷ್ಟು ಫಲಾನುಭವಿಗಳಿಗೆ ಪ್ರತಿ ತಿಂಗಳು ಹಣ ಜಮೆಯಾಗುತ್ತಿದ್ದು ಇದಕ್ಕೆ ಆಗುತ್ತಿರುವ ವೆಚ್ಚ ಎಷ್ಟು; (ವಿವರ ನೀಡುವುದು)</td><td>ಗೃಹಲಕ್ಷ್ಮೀ ಯೋಜನೆಯಡಿ ಫಲಾನುಭವಿಗಳಿಗೆ ಆಗಿರುವ ಮಾಹೆವಾರು ವೆಚ್ಚದ ಮಾಹಿತಿಯು ಈ ಕೆಳಗಿನಂತಿದೆ.<br><br>
<table>
<tr><th>ಕ್ರ. ಸಂ</th><th>ಮಾಹೆ</th><th>ಗೃಹಲಕ್ಷ್ಮೀ ಯೋಜನೆಯಡಿ ನೊಂದಣಿಯಾದ ಫಲಾನುಭವಿಗಳ (ಸಂಖ್ಯೆ ಕೋಟಿಗಳಲ್ಲಿ)</th><th>ಬಿಡುಗಡೆಗೊಳಿಸಲಾದ ಅನುದಾನ ರೂ. ಕೋಟಿಗಳಲ್ಲಿ)</th></tr>
<tr><td>1</td><td>ಆಗಸ್ಟ್</td><td>1.08</td><td>ರೂ.2,169</td></tr>
<tr><td>2</td><td>ಸೆಪ್ಟಂಬರ</td><td>1.14</td><td>ರೂ.2,288</td></tr>
<tr><td>3</td><td>ಅಕ್ಟೋಬರ್</td><td>1.16</td><td>ರೂ.2,344</td></tr>
<tr><td>4</td><td>ನವೆಂಬರ್</td><td>1.17</td><td>ರೂ.2,344</td></tr>
<tr><td>5</td><td>ಡಿಸೆಂಬರ್</td><td>1.17</td><td>ರೂ.2,349</td></tr>
<tr><td>6</td><td>ಜನವರಿ-24</td><td>1.21</td><td>ರೂ.2,422</td></tr>
</table>
<br>ಇದುವರೆಗೂ ಯೋಜನೆಯಡಿ 6 ತಿಂಗಳಿಗೆ ಒಟ್ಟು ರೂ.13,945 ಕೋಟಿಗಳನ್ನು ಬಿಡುಗಡೆಗೊಳಿಸಲಾಗಿದ್ದು, ರೂ.13,400 ಕೋಟಿಗಳನ್ನು ಫಲಾನುಭವಿಗಳಿಗೆ ಡಿ.ಬಿ.ಟಿ. ಮೂಲಕ ಯಶಸ್ವಿಯಾಗಿ ಪಾವತಿಸಲಾಗಿದೆ.</td></tr>
<tr><td>ಇ.</td><td>ಅರ್ಜಿ ಸ್ವೀಕೃತಗೊಂಡಿದ್ದರೂ ಸಾವಿರಾರು ಜನ ಫಲಾನುಭವಿಗಳಿಗೆ ಹಣ ಬಿಡುಗಡೆಯಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಹಣ ಬಿಡುಗಡೆಯಾಗದಿರಲು ಕಾರಣಗಳೇನು; ಮತ್ತು ಫಲಾನುಭವಿಗಳ ಸಂಖ್ಯೆ ಎಷ್ಟು;</td><td>ಬಂದಿದೆ.<br><br>ನೋಂದಣಿಯಾದ ಫಲಾನುಭವಿಗಳ ಪೈಕಿ ತಾಂತ್ರಿಕ ಸಮಸ್ಯೆ ಇರುವ (Aadhar not seeded, inactive bank account, NPCI failed, e-kyc failed, pending in CDPO login) ಫಲಾನುಭವಿಗಳಿಗೆ ಧನಸಹಾಯ ದೊರೆತಿರುವುದಿಲ್ಲ.<br><br>ತಾಂತ್ರಿಕ ಸಮಸ್ಯೆಯಿಂದ ಧನಸಹಾಯ ಜಮೆಯಾಗದಿರುವ ಒಟ್ಟು ಫಲಾನುಭವಿಗಳ ಸಂಖ್ಯೆ: 1,76,433 (ದಿನಾಂಕ:14.02.2024ರಂತೆ)</td></tr>
</table>

| | | |
|---|---|---|
| ಈ. | ಅರ್ಜಿ ಸ್ವೀಕೃತಗೊಂಡಿರುವ ಎಲ್ಲಾ ಫಲಾನುಭವಿಗಳ ಖಾತೆಗೆ ತಕ್ಷಣ ಹಣ ಜಮೆ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? | • ಫಲಾನುಭವಿಗಳ ಹೆಸರು, ಮೊಬೈಲ್ ಸಂಖ್ಯೆಗಳೊಂದಿಗೆ ಮಾಹಿತಿಗಳನ್ನು ತಾಲ್ಲೂಕುಗಳಿಗೆ ಕಳುಹಿಸಲಾಗಿದ್ದು, ಅಂತಹ ಫಲಾನುಭವಿಗಳನ್ನು ಖುದ್ದಾಗಿ ಭೇಟಿ ಮಾಡಿ ಅವರ ಅರ್ಜಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಬಗೆಹರಿಸಲು ಕ್ರಮವಹಿಸಲಾಗುತ್ತಿದೆ.<br>• ಮೇಲ್ವಿಚಾರಕಿಯರ ಮುಖಾಂತರ ಜನತಾದರ್ಶನ ಮತ್ತು ಇತರೆ ಸಾರ್ವಜನಿಕ ಸಭೆ ಸಮಾರಂಭಗಳಲ್ಲಿ ಫಲಾನುಭವಿಗಳಿಗೆ ಮಾಹಿತಿ ನೀಡಲಾಗಿದೆ.<br>• ಬ್ಯಾಂಕ್ ಖಾತೆಗೆ ಆಧಾರ್ ಜೋಡಣೆಯಾಗದ ಫಲಾನುಭವಿಗಳ ಸಮಸ್ಯೆಗಳನ್ನು ಪರಿಹರಿಸಲು ಲೀಡ್ ಬ್ಯಾಂಕ್ ನೊಂದಿಗೆ ಸಭೆಗಳನ್ನು ನಡೆಸಲಾಗಿದೆ, ಅತ್ಯಂತ ಶೀಘ್ರವಾಗಿ ಬ್ಯಾಂಕ್ ಖಾತೆ ತೆರೆದು ಆಧಾರ್ ಜೋಡಣೆ ಮಾಡುವ IPPB ಜೊತೆ ಸಂಪರ್ಕಿಸಿ ಕ್ರಮವಹಿಸಲಾಗಿದೆ. ಮತ್ತು ಜಿಲ್ಲೆಗಳಲ್ಲಿ ಕ್ರಮವಹಿಸುವ ಬಗ್ಗೆ ಉಪ ನಿರ್ದೇಶಕರಿಗೆ ಮಾಹಿತಿ ನೀಡಲಾಗಿದೆ.<br>• ರಾಜ್ಯದ ಎಲ್ಲಾ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳಿಗೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ನಿರ್ದೇಶನಾಲಯದ ಕಛೇರಿಯಲ್ಲಿ ಇ-ಆಡಳಿತ ಕೇಂದ್ರದ ಮುಖಾಂತರ ಬಾಕಿ ಅರ್ಜಿಗಳನ್ನು ಅಂತಿಮಗೊಳಿಸುವ ಬಗ್ಗೆ Hands on Training ಎಂಬ ತರಬೇತಿಯನ್ನು ಏರ್ಪಡಿಸಿ ನೀಡಲಾಗಿದೆ.<br>• ಕ್ಷೇತ್ರ ಮಟ್ಟದ ಅಧಿಕಾರಿಗಳು ಮತ್ತು ಸಿಬ್ಬಂದಿಗಳಿಗೆ ಅನೇಕ ವಿ.ಸಿ ಸಭೆಗಳನ್ನು ಆಯೋಜಿಸಿ, ಸಮಸ್ಯೆಗಳನ್ನು ಪರಿಹರಿಸಲಾಗುತ್ತಿದೆ.<br>• ಮಾನ್ಯ ಮುಖ್ಯಮಂತ್ರಿಯವರು, ಇಲಾಖಾ ಸಚಿವರು ಹಾಗೂ ಉನ್ನತ ಮಟ್ಟದ ಅಧಿಕಾರಿ ಸಭೆಯನ್ನು ನಡೆಸಿ ತೀರ್ಮಾನಿಸಿದಂತೆ ಗ್ರಾಮ ಪಂಚಾಯತ್ ಮಟ್ಟದಲ್ಲಿ ಗೃಹಲಕ್ಷ್ಮಿ ಯೋಜನೆಯ ಕುಂದು ಕೊರತೆಗಳ ಬಗ್ಗೆ ಸಾರ್ವಜನಿಕರಿಗೆ ಅದಾಲತ್ ನಡೆಸಲಾಗುತ್ತಿದೆ.<br>• ಪಡಿತರ ಚೀಟಿಯಲ್ಲಿ ಕುಟುಂಬದ ಯಜಮಾನಿ ಮಹಿಳೆಯ ಹೆಸರು ಬದಲಾವಣೆ ಬಗ್ಗೆ ಹಾಗೂ IT/GST ಪಾವತಿಸಿರುವ ಬಗ್ಗೆ ಪರಿಶೀಲನೆಗಾಗಿ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಹಂತದಲ್ಲಿ ಬಾಕಿ ಇದ್ದ ಅರ್ಜಿಗಳನ್ನು ಗ್ರಾಮ ಪಂಚಾಯತ್ ಗಳಿಗೆ ರವಾನಿಸಿ ಪರಿಶೀಲನಾ ಪ್ರಕ್ರಿಯೆಯನ್ನು ಸರಳಗೊಳಿಸಲಾಗಿದೆ.<br>• ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಆಯುಕ್ತಾಲಯದಿಂದ ಸ್ವ-ಸಹಾಯ ಗುಂಪಿನ ಮಹಿಳೆಯರು/ ಅಂಗನವಾಡಿ ಕಾರ್ಯಕರ್ತೆಯರು, ಮೇಲ್ವಿಚಾರಕಿಯರು ಮತ್ತು ಗ್ರಾಮಪಂಚಾಯತ್ ಸದಸ್ಯರುಗಳಿಗೆ ಆಯೋಜಿಸಲಾಗಿದ್ದ Youtube ತರಬೇತಿಯಲ್ಲಿ ಗೃಹಲಕ್ಷ್ಮಿ ಯೋಜನೆಯ ಬಗ್ಗೆ ಅರಿವು ಮೂಡಿಸಲಾಗಿದ್ದು, ಸದರಿ ತರಬೇತಿಯಲ್ಲಿ ತರಬೇತಾರ್ಥಿಗಳಿಗೆ ಇದ್ದ ಪ್ರಶ್ನೆಗಳಿಗೆ ಉತ್ತರಿಸಲಾಗಿದೆ. |

**ಸಂಖ್ಯೆ: ಮಮಇ 40 ಮಮಅ 2024**

**(ಲಕ್ಷ್ಮೀ ಆರ್. ಹೆಬ್ಬಾಳಕರ್)**
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಹಾಗೂ ಹಿರಿಯ ನಾಗರಿಕರ
ಸಬಲೀಕರಣ ಸಚಿವರು.

**ಅನುಬಂಧ-1**

**ಗೃಹಲಕ್ಷ್ಮಿ ಯೋಜನೆಗೆ ಇದುವರೆಗೆ ನೋಂದಾಯಿಸಿರುವ ಫಲಾನುಭವಿಗಳ ಜಿಲ್ಲಾವಾರು ಮಾಹಿತಿ**

| ಕ್ರ ಸಂ | ಜಿಲ್ಲೆಯ ಹೆಸರು | ನೋಂದಣಿ ಯಾಗಿರುವ ಫಲಾನುಭವಿಗಳು |
|---|---|---|
| 1 | ಬಾಗಲಕೋಟೆ | 395229 |
| 2 | ಬಳ್ಳಾರಿ | 274671 |
| 3 | ಬೆಳಗಾವಿ | 1066480 |
| 4 | ಬೆಂಗಳೂರು ಗ್ರಾಮಾಂತರ | 202540 |
| 5 | ಬೆಂಗಳೂರು ನಗರ | 878008 |
| 6 | ಬೀದರ್ | 320178 |
| 7 | ಚಾಮರಾಜನಗರ | 258649 |
| 8 | ಚಿಕ್ಕಬಳ್ಳಾಪುರ | 274315 |
| 9 | ಚಿಕ್ಕಮಗಳೂರು | 256394 |
| 10 | ಚಿತ್ರದುರ್ಗ | 375575 |
| 11 | ದಕ್ಷಿಣ ಕನ್ನಡ | 351847 |
| 12 | ದಾವಣಗೆರೆ | 352699 |
| 13 | ಧಾರವಾಡ | 358923 |
| 14 | ಗದಗ | 231454 |
| 15 | ಹಾಸನ | 434936 |
| 16 | ಹಾವೇರಿ | 368517 |
| 17 | ಕಲಬುರಗಿ | 523120 |
| 18 | ಕೊಡಗು | 114422 |
| 19 | ಕೋಲಾರ | 307237 |
| 20 | ಕೊಪ್ಪಳ | 306300 |
| 21 | ಮಂಡ್ಯ | 443073 |
| 22 | ಮೈಸೂರು | 670291 |
| 23 | ರಾಯಚೂರು | 407596 |
| 24 | ರಾಮನಗರ | 269435 |
| 25 | ಶಿವಮೊಗ್ಗ | 381557 |
| 26 | ತುಮಕೂರು | 616256 |
| 27 | ಉಡುಪಿ | 220831 |
| 28 | ಉತ್ತರ ಕನ್ನಡ | 313170 |
| 29 | ವಿಜಯನಗರ | 276776 |
| 30 | ವಿಜಯಪುರ | 469978 |
| 31 | ಯಾದಗಿರಿ | 240656 |
| | **ಒಟ್ಟು** | **11961113** |

ಅನುಬಂಧ-2

## ಗೃಹಲಕ್ಷ್ಮಿ ಯೋಜನೆಯಡಿ ಸ್ವೀಕೃತಗೊಂಡಿರುವ ಮತ್ತು ತಿರಸ್ಕೃತಗೊಂಡಿರುವ ಅರ್ಜಿಗಳ ಮಾಹಿತಿ

| ಕ್ರ ಸಂ | ಜಿಲ್ಲೆಯ ಹೆಸರು | ಸ್ವೀಕೃತಗೊಂಡಿರುವ ಅರ್ಜಿಗಳ ಸಂಖ್ಯೆ | ತಿರಸ್ಕೃತಗೊಂಡಿರುವ ಅರ್ಜಿಗಳ ಸಂಖ್ಯೆ |
|---|---|---|---|
| 1 | ಬಾಗಲಕೋಟೆ | 389292 | 1507 |
| 2 | ಬಳ್ಳಾರಿ | 270845 | 190 |
| 3 | ಬೆಂಗಳೂರು | 861142 | 1435 |
| 4 | ಬೆಳಗಾವಿ | 1051654 | 4067 |
| 5 | ಬೆಂಗಳೂರು ಗ್ರಾಮಾಂತರ | 198278 | 357 |
| 6 | ಬೀದರ್ | 314774 | 549 |
| 7 | ಚಾಮರಾಜನಗರ | 254267 | 117 |
| 8 | ಚಿಕ್ಕಬಳ್ಳಾಪುರ | 268567 | 299 |
| 9 | ಚಿಕ್ಕಮಗಳೂರು | 252825 | 115 |
| 10 | ಚಿತ್ರದುರ್ಗ | 369200 | 361 |
| 11 | ದಕ್ಷಿಣ ಕನ್ನಡ | 346928 | 2569 |
| 12 | ದಾವಣಗೆರೆ | 347353 | 1122 |
| 13 | ಧಾರವಾಡ | 353347 | 1379 |
| 14 | ಗದಗ | 227839 | 515 |
| 15 | ಹಾಸನ | 426800 | 839 |
| 16 | ಹಾವೇರಿ | 362603 | 189 |
| 17 | ಕಲಬುರಗಿ | 510932 | 787 |
| 18 | ಕೊಡಗು | 113010 | 411 |
| 19 | ಕೋಲಾರ | 301232 | 1053 |
| 20 | ಕೊಪ್ಪಳ | 300303 | 448 |
| 21 | ಮಂಡ್ಯ | 435918 | 546 |
| 22 | ಮೈಸೂರು | 659218 | 1310 |
| 23 | ರಾಯಚೂರು | 397486 | 116 |
| 24 | ರಾಮನಗರ | 263873 | 495 |
| 25 | ಶಿವಮೊಗ್ಗ | 376727 | 805 |
| 26 | ತುಮಕೂರು | 604097 | 2065 |
| 27 | ಉಡುಪಿ | 216493 | 8 |
| 28 | ಉತ್ತರ ಕನ್ನಡ | 308201 | 113 |
| 29 | ವಿಜಯನಗರ | 270046 | 440 |
| 30 | ವಿಜಯಪುರ | 460318 | 1606 |
| 31 | ಯಾದಗಿರಿ | 235184 | 234 |
| **Total** | | **11748752** | **26047** |